Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 217] ಗುರುವಾರ 5—8—48 [ಬಿಡಿ ಪ್ರತಿ 3 ಪೈ

ಗೋವಧೆ ನಿರೋಧ ಶಾಸನಕ್ಕೆ

ಶ್ರೀಮನ್ಮಹಾರಾಜರವರ ಒಪ್ಪಿಗೆ

ಮೈನರ್ ಟ್ಯಾಂಕ್ ರೆಸ್ಟೋರೇಷನ್ ಶಾಸನ, ಗೋವಧೆ ನಿರೋಧ ಶಾಸನ, ಪವಿತ್ರ ಸ್ಥಳಗಳಲ್ಲಿ ಪ್ರಾಣಿವಧಾ ನಿರೋಧ ಶಾಸನ, ಮತ್ತು ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಶಾಸನಗಳು ಶ್ರೀಮನ್ಮಹಾರಾಜರವರ ಒಪ್ಪಿಗೆ ಪಡೆದಿವೆ.

ಜನ್ಮೈತ್ ಉಲೇಮಾ-ಇ-ಹಿಂದ್ ಅಧ್ಯಕ್ಷರು ಕಲ್ಕತ್ತಾ ನಗರದಲ್ಲಿ ಶಾಂತಿ ಕದಲದಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಹೈದರಾಬಾದ್ ನಿಜಾಂ ಸೇನೆಯ ಹಿಲಾರ್ದರ್ ಎಂ. ಎ. ರಹಮಾನ್‌ನನ್ನು ಅನುಮಾನದ ಮೇಲೆ ಅಡೋನಿಯಲ್ಲಿ ದಸ್ತಗಿರಿ ಮಾಡಲಾಗಿದೆ.

ಕಳೆದ ವರ್ಷದಲ್ಲಿ 9375 ಚ. ಮೈಲಿಗಳಷ್ಟು ಪ್ರದೇಶವನ್ನು ಕಮ್ಯುನಿಸ್ಟ್ ಪಡೆ ಹತೋಟಿಗೆ ಪಡಿಯಿತು ಎಂದು ಪ್ರಕಟಣೆ ತಿಳಿಸುತ್ತದೆ. ಈ ವರಿಗೆ ಒಟ್ಟು 1471875 ಚ. ಮೈಲಿಗಳನ್ನು ವಶಪಡಿಸಿಕೊಂಡಿದ್ದಾಗಿ ಪ್ರಕಟಣೆ ತಿಳಿಸುತ್ತದೆ.

ಕಮ್ಯುನಿಸ್ಟರಿಂದ ಪ್ರೋತ್ಸಾಹಿಸಲ್ಪಟ್ಟ ಸೇನೆಗಳು ತಮಗಾಗಿರುವ ಕಳೆದ ಎರಡು ವರ್ಷಗಳ ನಷ್ಟ 81000 ಮಂದಿ ಎಂದು ತಿಳಿಸಿದೆ

ಕರ್ನಾಟಕ ಏಕೀಕರಣ ಮಹಾಸಭೆ ತುರ್ತಾಗಿ ನಾಳೆ ದಿವಸ ಹುಬ್ಬಳ್ಳಿಯಲ್ಲಿ ಸೇರುವುದು.

ಜಬ್ಬಲ್ಪುರಕ್ಕೆ ಹೋಗಬೇಕಾಗಿದ್ದ ನಾಲ್ಕು ಆರ್ಮಿ ಟ್ಯಾಂಕುಗಳನ್ನು ಹೈದರಾಬಾದಿನ ವಾಡಿ ಎಂಬಲ್ಲಿಗೆ ತಿರುಗಿಸಿದನೆಂದು ಕರ್ಕಿ ರೈಲ್ವೆ ಸ್ಟೇಷನ್ನಿನ ಮಹಮದೀಯ ಗೂಡ್ಸ್ ಗುಮಾಸ್ತನನ್ನು ದಸ್ತಗಿರಿ ಮಾಡಲಾಗಿದೆ

ಬೆಂಗಳೂರು ಅಡ್ವೊಕೇಟ್ ಮತ್ತು ಸಂಪಾದಕರುಗಳ ಕಂಟೆಪ್ಟ್ ಆಫ್ ಕೋರ್ಟ್‌ನ ರಿವಿಜನ ಅರ್ಜಿ ಬಗ್ಗೆ ಗೋಪಾಲರಾವ್ ವಿಚಾರಣಾ ಸಮಿತಿಯವರಿಗೆ ನೋಟೀಸ್ ಕೊಟ್ಟಿತ್ತು.

ಈ ರೀತಿ ನೋಟೀಸ್ ಕೊಡಲು ಹೈ ಕೋರ್ಟಿಗೆ ಅಧಿಕಾರವಿಲ್ಲ ಎಂದು ವಿಚಾರಣಾ ಸಮಿತಿಯವರು ನೋಟಿಸನ್ನು ವಾಪಸು ಮಾಡಿದ್ದಾರೆ,

ಮಧುರಾದ ಮಾನಮಧುರಾ ಬಳಿ ಸ್ಟೋನ್ ಏಜ್ ಕಾಲದ ಗುರುತುಗಳು ಸಿಕ್ಕಿವೆ ಕ್ರಿ. ಪೂ 50000 ವರ್ಷಗಳ ಪ್ರದೇಶಗಳು ದೊರೆತಿವೆ.

ಭಾರತ ಸರ್ಕಾರದ ಅರಿವೆ ನೀತಿಯನ್ನು ಪ್ರತಿಭಟಿಸಿ ಅಹಮದಾಬಾದಿನ ಹೋಲ್‌ಸೇಲ್ ಬಟ್ಟೆ ವರ್ತಕ ಸಂಘದವರು ಪಂ || ನೆಹರು, ಸ || ಪಟೇಲ್, ಮತ್ತು ಡಾ || ಶ್ಯಾಮಪ್ರಸಾದ್ ಮುಖರ್ಜಿಯವರುಗಳಿಗೆ ತಂತೀ ಕಳಿಸಿರುವರು.

ಗಡಿನಾಡಿನ ಸಾರ್ವಜನಿಕ ರಕ್ಷಣಾ ಶಾಸನಾನ್ವಯ ಮಾಜೀ ಪ್ರಧಾನಿ ಡಾ| ಖರ್ ಸಾಹೇಬರಿಗೆ 3 ತಿಂಗಳ ಕಾರಾಗೃಹ ಶಿಕ್ಷೆ ವಿಧಿಸಲಾಗಿದೆ

ಆಗಸ್ಟ್ ತಾ || 15 ರಲ್ಲಿ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಬೇಕೆಂದು ಶ್ರೀ ಟಿ. ಸಿದ್ಧಲಿಂಗಯ್ಯನವರಿಗೆ ದೆಹಲಿಯಿಂದ ಕರೆ ಬಂದಿದೆ

ಮಾಸ್ಕೋ, ಆ 3 — ಚೈನಾ ಕಮ್ಯುನಿಸ್ಟ್ ಪ್ರಜಾ ಸ್ವಾತಂತ್ರ್ಯ ಸೇನೆ ಟಾಸ್ ಮೂಲಕ ಪ್ರಕಟಣೆಯಿತ್ತು ಚೈನಾ ರಾಷ್ಟ್ರೀಯ ಪಡೆಗಳು ಕಳೆದ ಎರಡು ವರ್ಷಗಳ ಯಾದವೀ ಕಲಹದಲ್ಲಿ ಸಾವು, ಗಾಯ, ಅಜ್ಞಾತ ಮತ್ತು ಸೆರೆ ಇವುಗಳಿಂದ 2641000 ಮಂದಿಯನ್ನು ನಷ್ಟ ಮಾಡಿಕೊಂಡಿದೆ ಎಂದು ತಿಳಿಸಿದೆ.

ವರ್ತಮಾನ ಸಂಗ್ರಹ

ಬ್ರಿಟೀಷ್ ಸರ್ಕಾರ ಯಹೂದಿ ಮತ್ತು ಅರಬ್ ನಿರಾಶ್ರಿತರುಗಳ ಸಹಾಯಾರ್ಥವಾಗಿ ಒಂದು ಲಕ್ಷ ಪೌಂಡು ಕೊಡುವುದಾಗಿ ವಿಶ್ವಸಂಸ್ಥೆಯಲ್ಲಿ ಬ್ರಿಟೀಷ್ ಪ್ರತಿನಿಧಿ ತಿಳಿಸಿದ್ದಾರೆ.

ಂ ಂ

ತಿರುವಾಂಕೂರು ಶಾಸನ ಸಭೆಯಲ್ಲಿ ಪಾಸನಿರೋಧ ಮಸೂದಾ ಕಾನೂನನ್ನು ಮಂಡಿಸಲಾಗಿದೆ.

ಂ

ಬೊಂಬಾಯಿ ಮುಸ್ಲಿಂ ಲೀಗ್ ನಾಯಕ ಶ್ರೀ ಎಸ್. ಎಂ. ಗಾಜಿಯವರನ್ನು ದಸ್ತಗಿರಿ ಮಾಡಲಾಗಿದೆ.

ಂ ಂ

ಎಸ್. ಎಸ್. ಎಲ್. ಸಿ. ಪರೀಕ್ಷೆಯ ಉಪ ಪರೀಕ್ಷೆ ನವೆಂಬರ್‌ನಲ್ಲಿ ಜರಗುವುದೆಂದು ಸರ್ಕಾರ ಪ್ರಕಟಿಸಿದೆ

ಂ ಂ

ಭಾರತದ ಮಾಜೀ ಗೌ || ಜ || ಮೌಂಟುಬೇಟನ್ನರನ್ನು ರಷ್ಯಾದ ರಾಯಭಾರಿಯಾಗಿ ನೇಮಿಸಲು ಬ್ರಿಟನ್ನಿನಲ್ಲಿ ಮಹಾಪ್ರಯತ್ನ ಜರುಗುತ್ತಿದೆ

ಂ ಂ

ಗಾಂಧೀಜೀ ಕೊಲೆ ಮೊಖದ್ದಮೆಯಲ್ಲಿ ಸಿನಿಮಾ ತಾರೆ ಬಿಂಬ ಎನ್ನುವಳು ಸಾಕ್ಷ್ಯ ಕೊಟ್ಟಳು.

ಂ ಂ

ವಿಮಾನಾಕ್ಷಿ ಎಂಬ ಹಿಂದೂ ಯುವತಿಯನ್ನು ಜಾತಿಗೆಡಿರಿ, ಅನೀತಿ ಮಾರ್ಗವನ್ನನುಸರಿಸಲು ಬಲಾತ್ಕರಿಸಿದ 54 ವರ್ಷದ ಅಬ್ದುಲ್ ವಾಹಬ್ ಎಂಬುವನನ್ನು ಮದ್ರಾಸಿನಲ್ಲಿ ದಸ್ತಗಿರಿ ಮಾಡಲಾಗಿದೆ

ಂ ಂ

ಬೆಂಗಳೂರಿನಿಂದ ಶ್ರೀ ವೀರಣಗೌಡರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ದೈನಿಕ 'ವಾರ್ತಾ' ದೊಡ್ಡ ಆಕಾರದಲ್ಲಿ ಹೊರಡುತ್ತಿರುವುದು ಸಂತೋಷಕರವಾದ ಸಂಗತಿ. ವಾರ್ತಾ ಇನ್ನೂ ಅಭಿವೃದ್ಧಿಯಾಗಲೆಂದೇ ನಮ್ಮ ಹಾರೈಕೆ.

Woodlands

6—8—48 ರಿಂದ

— ಬೆಳಗಿನ ಪ್ರದರ್ಶನ —

ಖಜಾಂಚಿ

(ಅಮೋಘ ಹಿಂದಿ ಚಿತ್ರ)

ಪಾತ್ರ— ರಮೋಲಾ — ಇಸ್ಮೇಲ್

ಸೌರಾಷ್ಟ್ರದಲ್ಲಿ ಮಳೆಯೇ ಇಲ್ಲ

ಸೌರಾಷ್ಟ್ರದಲ್ಲಿ ಇಲ್ಲಿಯವರೆಗೂ ಒಂದು ಹನಿ ಮಳೆಯು ಸಹಾ ಆಗದ ಕಾರಣ ಬೆಳೆಗಳಂತೂ ನಾಶವಾಗುತ್ತಲಿವೆ ಹುಲ್ಲಂತೂ ಬೆಳೆಯಲೊಲ್ಲದು ದನಗಳೆಲ್ಲಾ ಉಪವಾಸಮಾಡುವ ಪ್ರಸಂಗಬಂದಿದೆ. ಆದ್ದರಿಂದ ಸೌರಾಷ್ಟ್ರದ ಕಲೆಕ್ಟರರ ಪರಿಷತ್ತಿನಲ್ಲಿ ದನಗಳಿಗೆ ಬೇಕಾದ ಮೇವಿನ ಸಲುವಾಗಿ ಚರ್ಚೆ ಮಾಡಲಾಯ್ತು. ದನಗಳಿಗೆ ಬೇಕಾದ ಮೇವು ತರಿಸುವುದಕ್ಕೋಸ್ಕರ ದಕ್ಷಿಣ ಹಿಂದೂಸ್ಥಾನ, ಮಧ್ಯ ಹಿಂದೂಸ್ಥಾನ ಬೊಂಬಾಯಿ ಈ ಕಡೆಗೆ ಆ ಖಾತೆಗೆ ಸಂಬಂಧಿಸಿದ ಅಧಿಕಾರಿಗಳು ಹುಲ್ಲನ್ನು ಒಯ್ಯುವ ವ್ಯವಸ್ಥೆ ಮಾಡಲು ಬಂದಿದ್ದಾರೆ ಮತ್ತು ಸಧ್ಯಕ್ಕೆ ದನಗಳಂತೂ ಉಪವಾಸ ನಡೆಸುತ್ತಿರುತ್ತವೆ. ಅವುಗಳಿಗೆ ಬೇಕಾದ ಮೇವು ದಕ್ಷಿಣ ಹಿಂದೂಸ್ಥಾನದಿಂದ ಹೋಗಲಿದೆ ಯೆಂದು ತಿಳಿಯುತ್ತದೆ. (ಸಂ)

ಪಶ್ಚಿಮ ಬಂಗಾಳಾದಿಂದ ಪಾಕಿಸ್ಥಾನಕ್ಕೆ ರವಾನೆಯಾಗುತ್ತಿದ್ದ 35000 ಜೊತೆ ಪಂಚೆ ಸೀರೆ, 7000 ಬಟ್ಟೆ ತುಂಡು. 23 ಸಾವಿರ ಗಜ ಷರ್ಟಿಂಗು 26 ಸಾವಿರ ಗಜ ಹತ್ತಿಬಟ್ಟೆ 1200 ಮಣ ಇತರ ಬಟ್ಟೆಯನ್ನು ಪೋಲೀಸರು ವಶಪಡಿಸಿಕೊಂಡರು.

ಂ ಂ

ಬೊಂಬಾಯಿ ಕಾಲಬ್ಬದೇವಿ ರಸ್ತೆಯಲ್ಲಿರುವ ಒಂದು ಗುದಾಮಿನಿಂದ ಹಾಡುಹಗಲಿನಲ್ಲಿ 40 ಸಾವಿರ ರೂಪಾಯಿ ಒಟ್ಟೆ ಕಳುವಾಗಿಹೋಗಿದೆ

ಂ

ಮಾಳವ ಡೊನಿನಿಯನ್ನಿನ ಥಾನಾವಾಡದ ಥಾಕೂರರು ಭಾರತ ಸರಕಾರಕ್ಕೆ ಶರಣಾಗತರಾಗಿದ್ದಾರೆ. ಇವರನ್ನು ದಸ್ತಗಿರಿ ಮಾಡಿ 10 ಸಾವಿರ ರೂ. ಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇವರ ಮೇಲೆ ಕೊಲೆಯೇ ಮೊದಲಾದ ಅನೇಕ ತ್ರಿವ್ಯಾಪಾದನೆಗಳಿವೆ. ಇವರ 23 ಮಂದಿ ಅನುಯಾಯಿಗಳನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ

Edited, Printed and Published by M S Krishna Rao at the Satyavadi Press, Chamaraj Agrahar, Mysore,

ಪದಾರ್ಥಗಳ ಬೆಲೆ ತಗ್ಗಿಸಲು ರಷ್ಯನರು ಅವಲಂಬಿಸಿದ ವಿಧಾನವೇನು?

——

ಕರೆನ್ಸಿ ವಿಧಾನವನ್ನು ಬದಲಾಯಿಸಿದರು. ಆ ಪದ್ಧತಿಯು ಇದು— ಹಳೇ ರೂಬಲ್ಲುಗಳು 3 ಸಾವಿರಕ್ಕೆ ಹೊಸ 3 ಸಾವಿರ ರೂಬಲ್ಲುಗಳು ಕೊಡಲ್ಪಡುವವು 3 ಸಾವಿರಕ್ಕೆ ಮೀರಿ 10 ಸಾವಿರದೊಳಗಾಗಿ ಮೊದಲನೆ 3 ಸಾವಿರ ವಿನಾಯಿಸಿ ಮಿಕ್ಕ 7 ಸಾವಿರಕ್ಕೆ ಮೂರು ಹಳೆಯ ರೂಬಲ್ಲುಗಳಿಗೆ ಹೊಸ ಎರಡು ರೂಬಲುಗಳಂತೆ ಕೊಡಲ್ಪಡುವುವು. ಸೇವಿಂಗ್ಸು ಬ್ಯಾಂಕುಗಳಲ್ಲಿಯೂ ಸ್ಟೇಟು ಬ್ಯಾಂಕುಗಳಲ್ಲಿಯೂ ಇರುವ ಹಣದ ವಿಷಯದಲ್ಲಿಯೂ ಈ ಪದ್ಧತಿ ಅವಲಂಬಿಸಲ್ಪಡುವುದು. ಸಹಕಾರ ಸಂಸ್ಥೆಗಳಲ್ಲಿಯೂ ಇತರ ಪ್ರಜಾಹಿತ ಸಂಸ್ಥೆಗಳಲ್ಲಿಯೂ ಇಡಲ್ಪಟ್ಟಿರುವ ಹಣದ ವಿಷಯದಲ್ಲಿ 5 ನೇ 4 ಭಾಗ ಮಾತ್ರ ಜಮೆ ಮಾಡಲ್ಪಡುವುದು. ಈ ಬಗೆಯಲ್ಲಿ ರಷ್ಯಾದಲ್ಲಿ 15-12-47 ರಿಂದ ಹೊಸ ಕರೆನ್ಸಿ ವಿಧಾನವನ್ನು ಜಾರಿಗೆ ತಂದು ಜನರಿಗೆ ಧಾನ್ಯದ ಬೆಲೆ ತಗ್ಗಲು ಸಹಾಯ ಮಾಡುತ್ತಿರುವರು. ನ್ಯಾಯವಾದ ಮಾರ್ಗದಿಂದ ಧನಾರ್ಜನೆ ಮಾಡಿದವರಿಗೆ ಈ ಬದಲಾವಣೆಯಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ. ಕೃತ್ರಿಮ ಪದ್ಧತಿಗಳಿಂದ ಧನಾರ್ಜನೆ ಮಾಡಿದವರಿಗೇ ತೊಂದರೆಯು ಹೆಚ್ಚಾಗುಗಿರುವಿಕೆ. (ತ್ರಿ)

Save the Cow

ಗೋ ವಧೆ ನಿಲ್ಲಲಿ

At Opera

31—7—48 ರಿಂದ

ಟಿ. ಆರ್. ರಾಮಚಂದ್ರ

ಎಂ ಆರ್ ಸ್ವಾಮಿನಾಥನ್ ಭಾಗ್ಯಂ

ಟಿ. ಪ್ರೇಮಾವತಿ ಪಾತ್ರವಹಿಸಿರುವರು

ವಿದ್ಯಾಪತಿ

(ತಮಿಳು)

.... ಪ್ರತಿದಿನ 3 ಆಟಗಳು ....

ಬಣ್ಣದ ರೀಲುಗಳುಳ್ಳದ್ದು

Morning Shows from 6-8-48

RETURNING OF FIGHTING HERO

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವ

ಶ್ರೀ 'ಓಂ' ಗುರುತಿನ ಕೇ...

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂ
ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿ
ಸ್ಪಷ್ಟವಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊ
ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಅಕ್ಷೇಪ
ರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ.
ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂ
ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು
1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ
ತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

ಗಳಿ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ